# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 770 |
| ಸದಸ್ಯರ ಹೆಸರು | ಶ್ರೀ ಡಿ.ಎಸ್.ಅರುಣ್ |
| ಉತ್ತರಿಸುವ ದಿನಾಂಕ | 22/02/2023 |
| ಉತ್ತರಿಸುವವರು | ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮುಜರಾಯಿ ಇಲಾಖೆ ದೇವಸ್ಥಾನಗಳಿಗೆ ದಾನ, ಉಂಬಳಿ ಮೂಲಕ ದೊರೆತ ಭೂಮಿ ಹಾಗೂ ಜಾಗವನ್ನು ಪರಭಾರೆ ಮಾಡುವ ಕುರಿತು ಇರುವ ನಿಯಮಗಳೇನು:(ಸದರಿ ನಿಯಮಗಳ ಪ್ರತಿ ನೀಡುವುದು) | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997 ಸೆಕ್ಷನ್ 62 ರನ್ವಯ. ಸ್ಥಿರ ಸ್ವತ್ತಿನ ಪರಭಾರೆ.- (1) ಯಾವುದೇ ಅಧಿಸೂಚಿತ ಸಂಸ್ಥೆ ಅಥವಾ ಘೋಷಿತ ಸಂಸ್ಥೆಗೆ ಸೇರಿದ ಅಥವಾ ಕೊಟ್ಟ ಅಥವಾ ಅದರ ಉದ್ದೇಶಕ್ಕಾಗಿ ದತ್ತಿ ನೀಡಿದ ಯಾವುದೇ ಸ್ಥಿರ ಸ್ವತ್ತಿನ ಯಾವುದೇ ವಿನಿಮಯ, ದಾನ, ಮಾರಾಟ ಅಥವಾ ಅಡಮಾನ ಅಥವಾ ಗುತ್ತಿಗೆಯು, ಇದು ಸಂಸ್ಥೆಗೆ ಅಗತ್ಯವೆಂದುಅಥವಾ ಲಾಭದಾಯಕವಾದುದೆಂದು ರಾಜ್ಯ ಸರ್ಕಾರವು ಇದಕ್ಕೆ ಮಂಜೂರಾತಿ ನೀಡಿದ ಹೊರತು, ಅಕೃತವಾಗ ತಕ್ಕದ್ದು ಮತ್ತು ಶೂನ್ಯವಾಗ ತಕ್ಕದ್ದು ಮತ್ತು ನಿಯಮಿಸ ಬಹುದಾದಂಥ ನಿರ್ಬಂಧಗಳು ಅಥವಾ ಷರತ್ತುಗಳಿಗೆ ಒಳಪಟ್ಟು ಅಂಥ ಮಂಜೂರಾತಿಗಳನ್ನು ನೀಡತಕ್ಕದ್ದು:<br><br>ಪರಂತು, ಅಂಥ ಮಂಜೂರಾತಿಗೆ ಒಪ್ಪಿಗೆ ನೀಡುವುದಕ್ಕೆ ಮೊದಲು, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಉದ್ದೇಶಿತ ವ್ಯವಹಾರಕ್ಕೆ ಸಂಬಂಧಪಟ್ಟ ವಿವರಗಳನ್ನು ನಿಯಮಿಸ ಬಹುದಾದಂಥ ವಿಧಾನದಲ್ಲಿ ಪ್ರಕಟಿಸತಕ್ಕದ್ದು ಮತ್ತು ಈ ಬಗ್ಗೆ ಪಡೆದುಕೊಂಡ ಎಲ್ಲಾ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಸೂಕ್ತವಾಗಿ ಪರಿಗಣಿಸತಕ್ಕದ್ದು.(ಪ್ರತಿ ಒದಗಿಸಿದೆ) |
| ಆ) | ದೇವಸ್ಥಾನಗಳ ಆಸ್ತಿಗಳನ್ನು ಪರಭಾರೆ ಮಾಡುವುದರಿಂದ ದೇವಸ್ಥಾನದ ಆರ್ಥಿಕ ಸ್ಥಿತಿಗೆ ಅನಾನುಕೂಲ ಉಂಟಾಗುವುದಿಲ್ಲವೇ: ಪರಭಾರೆ ಮಾಡುವುದರಿಂದ ಸದರಿ ದೇವಸ್ಥಾನಗಳಿಗೆ ಯಾವ ರೀತಿ ಉಪಯೋಗವಾಗುವುದು: (ಇಲ್ಲಿಯವರೆಗೆ ದೇವಸ್ಥಾನಗಳ ಆಸ್ತಿಗಳನ್ನು ಪರಭಾರೆ ಮಾಡಿರುವ ಜಿಲ್ಲಾವಾರು ವಿವರ ನೀಡುವುದು) | ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ದೇವಸ್ಥಾನಗಳ ಬಹುತೇಕ ಜಮೀನುಗಳನ್ನು ಕೆಳಕಂಡ ಕಾಯ್ದೆ ಗಳಡಿಯಲ್ಲಿ<br>A) ಮೈಸೂರು (ಧರ್ಮಾದಾಯ ಮತ್ತು ದತ್ತಿ) ಇನಾಂ ರದ್ದತಿ ಕಾಯ್ದೆ 1955<br>B) ಕರ್ನಾಟಕ ವಿವಿಧ ಇನಾಂ (ರದ್ದಿಯಾತಿ) ಕಾಯ್ದೆ 1977<br>C) ಕರ್ನಾಟಕ ಸಂಡೂರು ಪ್ರದೇಶ ಇನಾಂ (ರದ್ದಿಯಾತಿ) ಕಾಯ್ದೆ 1976<br>D) ಕರ್ನಾಟಕ (ಬೆಳಗಾಂ ಮತ್ತು ಕಲಬುರಗಿ ಪ್ರದೇಶ) (ಧರ್ಮಾದಾಯ ಮತ್ತು ದತ್ತಿ)ಇನಾಂ ರದ್ದತಿ ಕಾಯ್ದೆ 1973.<br>E) ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 |

| | | |
|---|---|---|
| | | **(i)** ವಿವಿಧ ಭೂ-ನ್ಯಾಯಮಂಡಳಿಗಳ ಆದೇಶಗಳನ್ವಯ (ಅಧಿಬೋಗದಾರಿಕೆ ಹಕ್ಕಿನ ಮಂಜೂರಾತಿ) ಪರಭಾರೆಗಳಾಗಿರುತ್ತದೆ ಹಾಗೂ ಕೆಲವು ಜಮೀನುಗಳು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಕಲಂ 62 ಹಾಗೂ ನಿಯಮ 2002ರ ನಿಯಮ 28 ರಡಿಯಲ್ಲಿ ಮತ್ತು ಸದರಿ ಕಾಯ್ದೆ ಬರುವ ಪೂರ್ವದಲ್ಲಿದ್ದ ಸೆಕ್ಷನ್ 23 ರಡಿಯಲ್ಲಿನ ಉಪ ಕಲಂ (ಬಿ) (ಸಿ) (ಡಿ) (ಇ) ಮತ್ತು (ಎಫ್) ಕಾಯ್ದೆಗಳಡಿ ಯಲ್ಲಿಯೂ ಸಹ ಜಮೀನುಗಳನ್ನು ಪರಭಾರೆ ಮಾಡಬಹು ದಾಗಿರುತ್ತದೆ. ಮುಂದುವರೆದು ಭೂಸ್ವಾಧೀನ ಕಾಯ್ದೆ 1891 ಹಾಗೂ ಭೂ ಆರ್ಜನೆಯಲ್ಲಿ ಯೋಗ್ಯ ಪರಿಹಾರ ಮತ್ತು ಪಾರದರ್ಶಕತೆ ಹಾಗೂ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗೆ ಅಧಿಕಾರ ಅಧಿನಿಯಮ, 2013ರ (ಕೇಂದ್ರ ಅಧಿನಿಯಮ ಸಂಖ್ಯೆ:30) ರಡಿ ಯಲ್ಲಿಯೂ ಸಹ ದೇವಾಲಯದ ಜಮೀನನ್ನು ಭೂಸ್ವಾಧೀನ, ಪರಭಾರೆ ಪಡಿಸಿಕೊಳ್ಳಲಾಗಿರುತ್ತದೆ. ಈ ರೀತಿ ಭೂ-ಸ್ವಾಧೀನ ಪಡಿಸಿಕೊಳ್ಳಲಾದ ಜಮೀನುಗಳಲ್ಲಿ ದೇವಾಲಯಗಳಿಗೆ ದಾನ ಮಾಡಿದ ಭೂಮಿಗಳು ಸಹ ಸೇರಿರುವುದಾಗಿರುತ್ತದೆ.<br><br>(ii) ಇಲಾಖೆಯ ವ್ಯಾಪ್ತಿಯಲ್ಲಿ 205 "ಎ" ಪ್ರವರ್ಗದ ದೇವಾಲಯಗಳು, 193 ಪ್ರವರ್ಗ 'ಬಿ' ದೇವಾಲಯ ಗಳು, 34165 ಪ್ರವರ್ಗ 'ಸಿ' ದೇವಾಲಯಗಳು ಇದ್ದು ಈ ದೇವಾಲಯಗಳ ಸಾವಿರಾರು ಎಕರೆ ಭೂಮಿಯು ಇನಾಂ ರದ್ದಿಯಾತಿ ಕಾಯ್ದೆ ಮತ್ತು ಭೂಸುಧಾರಣಾ ಕಾಯ್ದೆಯಡಿ ಯಲ್ಲಿ ಪರಭಾರೆಯಾಗಿರುತ್ತವೆ.<br><br>ಸದರಿ "ಬಿ" ಮತ್ತು 'ಸಿ' ವರ್ಗದ ದೇವಾಲಯಗಳ ಸ್ವತ್ತುಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ತಹಶೀಲ್ದಾರ್ ರವರೇ ಸಕ್ಷಮ ಪ್ರಾಧಿಕಾರಿ ಗಳಾಗಿರುತ್ತಾರೆ. ಅಲ್ಲದೆ ಭೂ ನ್ಯಾಯ ಮಂಡಳಿಯ ಅಧ್ಯಕ್ಷರು ಸಂಬಂಧಪಟ್ಟ ಉಪವಿಭಾಗದ ಉಪ ವಿಭಾಗಾಧಿಕಾರಿ/ ಸಹಾಯಕ ಆಯುಕ್ತರು ಆಗಿದ್ದು, ಕಂದಾಯ ಇಲಾಖೆ ತಾಲ್ಲೂಕು ತಹಶೀಲ್ದಾರ್ ರವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.<br><br>(iii) ಕರ್ನಾಟಕ ರಾಜ್ಯಪತ್ರ ಅಧಿಸೂಚನೆ ಸಂಖ್ಯೆ: ಸಂವ್ಯಶಾ 52 ಶಾಸನ 2021, ಬೆಂಗಳೂರು, ದಿನಾಂಕ:18.01.2022 ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ದೇವಾಲಯಕ್ಕೆ ಸೇರಿರುವ ಮತ್ತಷ್ಟು ಇನಾಂ ಜಮೀನುಗಳು ರೀಗ್ರ್ಯಾಂಟ್ ಆಗುವ ಸಾಧ್ಯತೆ ಇದೆ. |

| | | |
|---|---|---|
| | | ಭೂನ್ಯಾಯ ಮಂಡಳಿಯಲ್ಲಿ ಭೂ ಪರಭಾರೆಗೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳಲ್ಲಿ ಅಧಿಸೂಚಿತ ಸಂಸ್ಥೆಗಳಿಗೆ ಸೇರಿದ ಸಾವಿರಾರು ಎಕರೆ ಭೂಮಿಯ ಪರಭಾರೆಯು ಇಲಾಖೆಯ ಗಮನಕ್ಕೂ ಸಹ ಬಾರದೇ ಆದೇಶವಾಗುತ್ತದೆ. ಮೇಲ್ಕಂಡ ಜಮೀನುಗಳ ಭೂದಾಖಲೆಗಳು ತಾಲ್ಲೂಕು ಕಛೇರಿಯ ತಹಶೀಲ್ದಾರ್ ರವರ ಸುಪರ್ಧಿಯಲ್ಲಿ ಇರುತ್ತದೆ.<br><br>(iv) ಸರ್ಕಾರದ ಆದೇಶ ಸಂಖ್ಯೆ ಕಂ.ಇ.23 ಮುಸೇವಿ 2020 ದಿನಾಂಕ:18-06-2020ರ ಆದೇಶದಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 5 ರನ್ವಯ ಕಂದಾಯ ಇಲಾಖೆಯ ಗ್ರಾಮಲೆಕ್ಕಿಗರು/ಕಂದಾಯ ನಿರೀಕ್ಷಕರು/ನಾಡ ಕಚೇರಿಯ ಉಪ ತಹಶೀಲ್ದಾರ್ ಗಳಿಗೆ ಸಂಬಂಧಪಟ್ಟ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ "ಸಿ" ಮುಜರಾಯಿ ದೇವಾಲಯಗಳ (ವಾರ್ಷಿಕವಾಗಿ ರೂ. 5.00 ಲಕ್ಷಗಳಿಗೂ ಕಡಿಮೆ ಆದಾಯ) ಚರ ಸ್ಥಿರಾಸ್ತಿ ಮತ್ತು ಲೆಕ್ಕ ಪತ್ರಗಳ ನಿರ್ವಹಣೆಯನ್ನು ನಿರ್ವಹಿಸುವಂತೆ ಆದೇಶಿಸಲಾಗಿರುತ್ತದೆ.<br><br>ದೇವಸ್ಥಾನಗಳ ಆಸ್ತಿಗಳನ್ನು ಪರಭಾರೆ ಮಾಡುವುದರಿಂದ ದೇವಸ್ಥಾನದ ಪ್ರತಿನಿತ್ಯದ ಪೂಜಾ ಕೈಂಕರ್ಯಕ್ಕೆ ಅನುಕೂಲವಾಗುವ ರೀತಿ ವಾರ್ಷಿಕ ತಸ್ತೀಕ್ ಮತ್ತು ವರ್ಷಾಸನ ಅನುದಾನವನ್ನು ನೀಡಲಾಗುತ್ತಿದೆ.<br><br>ಭೂನ್ಯಾಯ ಮಂಡಳಿಯಲ್ಲಿ ಭೂ ಪರಭಾರೆಗೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳಲ್ಲಿ ಅಧಿಸೂಚಿತ ಸಂಸ್ಥೆಗಳಿಗೆ ಸೇರಿದ ಸಾವಿರಾರು ಎಕರೆ ಭೂಮಿಯ ಪರಭಾರೆಯು ಇಲಾಖೆಯ ಗಮನಕ್ಕೂ ಸಹ ಬಾರದೇ ಆದೇಶವಾಗುತ್ತದೆ. ಮೇಲ್ಕಂಡ ಜಮೀನುಗಳ ಭೂದಾಖಲೆಗಳು ತಾಲ್ಲೂಕು ಕಛೇರಿಯ ತಹಶೀಲ್ದಾರ್ ರವರ ಸುಪರ್ಧಿಯಲ್ಲಿ ಇರುತ್ತದೆ. ತಹಶೀಲ್ದಾರ್ ರವರು ಇನಾಂ ಕಾಯ್ದೆ, ಭೂಸುಧಾರಣೆ ಕಾಯ್ದೆಗಳ ಅಡಿಯಲ್ಲಿ ರಚಿಸಲಾದ ಭೂ ನ್ಯಾಯಮಂಡಳಿಯ ಸದಸ್ಯ ಕಾರ್ಯದರ್ಶಿಯವರಾದ ಕಾರಣ ಪ್ರಕರಣಗಳ ಕಡತಗಳು ಸಕ್ಷಮ ಪ್ರಾಧಿಕಾರಿಗಳ ಬಳಿ ಇರುವುದರಿಂದ ಸದರಿ ನಿರ್ವಹಣೆಯು ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ನಿರ್ವಹಿಸುವುದಿಲ್ಲ. |

| | | |
|---|---|---|
| ಇ) | ನ್ಯಾಯಾಲಯದ ತೀರ್ಪುಗಳ ಅನುಗುಣವಾಗಿ ದೇವಸ್ಥಾನದ ಆಸ್ತಿಯನ್ನು ಪರಭಾರೆ ಮಾಡಲಾಗುತ್ತಿದೆಯೇ: (ದೇವಸ್ಥಾನಗಳ ಆಸ್ತಿಗಳ ಪರಭಾರೆ ನಿಯಮ ಹಾಗೂ ನ್ಯಾಯಾಲಯದ ತೀರ್ಪುಗಳ ಮಾಹಿತಿಯನ್ನು ನೀಡುವುದು) | ಇನಾಂ ಕಾಯ್ದೆ, ಭೂಸುಧಾರಣೆ ಕಾಯ್ದೆಗಳ ಅಡಿಯಲ್ಲಿ ರಚಿಸಲಾದ ಭೂ ನ್ಯಾಯಮಂಡಳಿಯ ಸದಸ್ಯ ಕಾರ್ಯದರ್ಶಿಗಳು ತಹಶೀಲ್ದಾರ್‌ರವರು ಆಗಿರುವುದರಿಂದ ಸದರಿ ನಿರ್ವಹಣೆಯು ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿ ಬರುವುದಿಲ್ಲ. |
| ಈ) | ಮುಜರಾಯಿ ದೇವಸ್ಥಾನಗಳ ಹುಂಡಿಗಳಿಂದ ಪ್ರತಿ ಮಾಹೆ/ವಾರ್ಷಿಕವಾಗಿ ಸಂಗ್ರಹವಾಗುವ ಹಣವೆಷ್ಟು ಹಾಗೂ ಸದರಿ ಹಣವನ್ನು ಯಾವ ಯಾವ ಪ್ರಮಾಣದಲ್ಲಿ ಹಾಗೂ ಯಾವ ಯಾವ ಕ್ಷೇತ್ರ/ಯೋಜನೆಗಳಿಗೆ ವಿಂಗಡಿಸುವ ಮೂಲಕ ಸರ್ಕಾರ ಸದುಪಯೋಗಪಡಿಸಿಕೊಳ್ಳುತ್ತಿದೆ. | ಅಧಿಸೂಚಿತ ದೇವಾಲಯಗಳ ಹುಂಡಿಗಳಿಂದ ಪ್ರತಿ ಮಾಹೆ/ವಾರ್ಷಿಕವಾಗಿ ಸಂಗ್ರಹವಾಗುವ ಹಣವನ್ನು ಆಯಾಯ ದೇವಾಲಯಗಳ ಹೆಸರಿನಲ್ಲಿ ತೆರಯಲಾದ ಬ್ಯಾಂಕಿನ ಉಳಿತಾಯ ಖಾತೆಗೆ ಜಮೆ ಮಾಡಲಾಗುತ್ತದೆ. ಮತ್ತು ಆಯಾಯ ದೇವಾಲಯಗಳಿಂದ ಬರುವ ವಾರ್ಷಿಕ ಆದಾಯವನ್ನು ದೇವಾಲಯದ ಸಿಬ್ಬಂದಿ ವೆಚ್ಚ, ನಿತ್ಯ ಕಟ್ಲೆ, ಹೆಚ್ಚು ಕಟ್ಲೆ, ರಥೋತ್ಸವ, ಜೀರ್ಣೋದ್ದಾರ ಇತ್ಯಾದಿಗಳಿಗೆ ಖರ್ಚು ಮಾಡಲಾಗುತ್ತದೆ.<br><br>2021-22ನೇ ಸಾಲಿನಲ್ಲಿ 205 ಅಧಿಸೂಚಿತ ಪ್ರವರ್ಗ "ಎ" ಮತ್ತು 193 ಪ್ರವರ್ಗ "ಬಿ" ದೇವಾಲಗಳಿಂದ ಹುಂಡಿ, ಸೇವಾರ್ಥ, ಕಾಣಿಕೆ ಇತ್ಯಾದಿ ಮೂಲಗಳಿಂದ ಬಂದ ಒಟ್ಟು ಆದಾಯ ರೂ. 44682.01 ಲಕ್ಷಗಳು ಸಂಗ್ರಹವಾಗಿರುತ್ತದೆ. (ವಿವರಗಳನ್ನು ಅನುಬಂದ ದಲ್ಲಿ ಒದಗಿಸಲಾಗಿದೆ) |
| ಉ) | ಹುಂಡಿಯಿಂದ ಲಭ್ಯವಾಗುವ ಹಣಕ್ಕೆ ಪ್ರತಿಯಾಗಿ ಸದರಿ ದೇವಸ್ಥಾನಗಳಿಗೆ ದೊರಕುವ ಸೌಲಭ್ಯ ಕಾಮಗಾರಿ ಹಾಗೂ ಜೀರ್ಣೋದ್ದಾರ ಕಾರ್ಯಗಳಿಗೆ ಸರ್ಕಾರ ನೀಡುತ್ತಿರುವ ಧನ ಸಹಾಯವೇನು? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) | ಅಧಿಸೂಚಿತ ದೇವಾಲಗಳ ಹುಂಡಿಯಿಂದ ಲಭ್ಯವಾಗುವ ಹಣವನ್ನು ಆಯಾಯ ದೇವಾಲಯಗಳಿಂದ ಬರುವ ವಾರ್ಷಿಕ ಆದಾಯವನ್ನು ದೇವಾಲಯದ ಸಿಬ್ಬಂದಿ ವೆಚ್ಚ, ನಿತ್ಯ ಕಟ್ಲೆ, ಹೆಚ್ಚು ಕಟ್ಲೆ, ರಥೋತ್ಸವ, ಜೀರ್ಣೋದ್ದಾರ ಇತ್ಯಾದಿಗಳಿಗೆ ಖರ್ಚು ಮಾಡಲಾಗುತ್ತದೆ. ಸರ್ಕಾರದಿಂದ ದೇವಸ್ಥಾನಗಳಿಗೆ ಯಾವುದೇ ಧನ ಸಹಾಯವನ್ನು ನಿರೀಕ್ಷಿಸುವ ಪ್ರಶ್ನೆ ಉದ್ಭವಿಸುವುದಿಲ್ಲ |

ಸಂಖ್ಯೆ: ಕಂಇ 37 ಮುಸಪು 2023

**(ಶಶಿಕಲಾ. ಅ.ಜೊಲ್ಲೆ)**
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು